ಚಾಮುಂಡೇಶ್ವರಿ ವಿದ್ಯುತ್‌ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ – ಕೊಡಗು,
ಶ್ರೀ ಹರ್ಷರಸ್ತೆ, ಮೈಸೂರು.
ದೂರವಾಣಿ: 0821-2420850

CHAMUNDESHWARI ELECTRICIT
SUPPLY CORPORATION LIMITED
*(A Government of Karnataka Undertaking)*
O&M Circle, Chamarajanagar-Kodagu,
MPL Compound, Sri Harsha Road,
Mysuru-570001.
Web site: www.cescmysore.org
E-mail ID: seechnkodagu@cescmysore.org

Company Identity Number (CIN):U40109KA2004SGC035177

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2023-24/ ಲ್ಗಳ·133 ದಿನಾಂಕ: 08 JAN 2024

## ಜನ ಸಂಪರ್ಕ ಸಭೆಯ ನಡಾವಳ

ದಿನಾಂಕ 27.12.2023ರ ಬುಧವಾರ ಪೂರ್ವಾಹ್ನ 11 ಗಂಟೆಯಿಂದ 12 ಗಂಟೆಯವರೆಗೆ ಸೆಸ್ಕ್ ಉಪವಿಭಾಗ ಕಛೇರಿ ಸೋಮವಾರಪೇಟೆಯಲ್ಲಿ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ಚಾವಿಸನಿನಿ ಕಾ ಮತ್ತು ಪಾ ಚಾ-ನಗರ-ಕೊಡಗು ವೃತ್ತ, ಮೈಸೂರುರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳ.

**ಉಪಸ್ಥಿತರಿದ್ದ ಅಧಿಕಾರಿಗಳು**

1. ಶ್ರೀ.ಸೋಮಶೇಖರ್, ಅಧೀಕ್ಷಕ ಇಂಜಿನಿಯರ್(ವಿ) ಚಾವಿಸನಿನಿ ಕಾ ಮತ್ತು ಪಾ ಚಾ ನಗರ-ಕೊಡಗು ವೃತ್ತ, ಮೈಸೂರು.
2. ಶ್ರೀಮತಿ.ಅನಿತಾ ಬಾಯಿ, ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಸೆಸ್ಕ್ ಕಾ ಮತ್ತು ಪಾ ವಿಭಾಗ ಮಡಿಕೇರಿ.
3. ಶ್ರೀ.ರವಿ.ವಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಪ್ರ) ಸೆಸ್ಕ್ ಕಾ ಮತ್ತು ಪಾ ಉಪವಿಭಾಗ ಸೋಮವಾರಪೇಟೆ.
4. ಶ್ರೀ.ಲೋಕೇಶ ಹೆಚ್.ಡಿ, ಸಹಾಯಕ ಇಂಜಿನಿಯರ್(ತಾಂ)(ಪ್ರ) ಚಾ.ವಿ.ಸ.ನಿ.ನಿ ಸೋಮವಾರಪೇಟೆ.
5. ಶ್ರೀ.ರವಿ.ವಿ, ಸಹಾಯಕ ಇಂಜಿನಿಯರ್(ವಿ) ಚಾ.ವಿ.ಸ.ನಿ.ನಿ ಸೋಮವಾರಪೇಟೆ.
6. ಶ್ರೀ.ವಿಜಯ ಕುಮಾರ್ ಎಂ.ಈ, ಕಿರಿಯ ಇಂಜಿನಿಯರ್(ವಿ) ಚಾ.ವಿ.ಸ.ನಿ.ನಿ ಶಾಂತಳ್ಳಿ.
7. ಶ್ರೀ.ಗಿರಿ ಎಂಸಿ, ಹಿರಿಯ ಸಹಾಯಕ(ಪ್ರ), ಚಾ.ವಿ.ಸ.ನಿ.ನಿ ಸೋಮವಾರಪೇಟೆ.

ಅದೀಕ್ಷಕ ಇಂಜಿನಿಯರ್(ವಿ) ರವರು ಸಭೆಗೆ ಹಾಜರಾದ ಎಲ್ಲರನ್ನು ಸ್ವಾಗತಿಸಿ ಸ್ಥಳೀಯ ಅಧಿಕಾರಿಗಳನ್ನೊಳಗೊಂಡಂತೆ ಜನ ಸಂಪರ್ಕ ಸಭೆ ಆಯೋಜಿಸಿ ಅಹವಾಲುಗಳನ್ನು ಸ್ವೀಕರಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವ ಸಲುವಾಗಿ ಈ ಸಭೆಯನ್ನು ನಡೆಸಲಾಗುತ್ತಿದ್ದು ವಿದ್ಯುತ್ ಸರಬರಾಜು, ನಿರ್ವಹಣೆ ಹಾಗು ಇನ್ನಿತರ ಸಮಸ್ಯೆಗಳ ಬಗ್ಗೆ ತಮ್ಮ ಅಹವಾಲುಗಳನ್ನು ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಸಭೆಗೆ ಮಂಡಿಸುವಂತೆ ಕೋರಿದರು ಹಾಗು ಸದರಿ ಸಮಸ್ಯೆಗಳಿಗೆ ಆದ್ಯತೆ ಮೇಲೆ ಸಮಸ್ಯೆಗಳ ಪರಿಹಾರಕ್ಕಾಗಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

| ಕ್ರಮ ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರಿನ ವಿವರ | ಅನುಸರಣೆ |
|---|---|---|---|
| 1. | ಶ್ರೀ.ವೀರೇಶ್, ಕೂಗೇಕೊಡಿ ಗ್ರಾಮ, ಶಾಂತಳ್ಳಿ | * ಅನೇಕ ವರ್ಷಗಳಿಂದ ಕಾಗಡಿಕಟ್ಟೆ ಜಂಕ್ಷನ್‌ನಿಂದ ಹೊನ್ನವಳ್ಳಿ ಗ್ರಾಮದವರೆಗೆ 11 ಕೆ.ವಿ ಲೈನ್ ತೋಟದೊಳಗೆ ಹಾದು ಹೋಗಿದ್ದು, ಮಳೆಗಾಲದಲ್ಲಿ ಬಾರಿ ವಿದ್ಯುತ್ ಅಡಚಣೆ ಆಗುತ್ತಿರುವ ಬಗ್ಗೆ ತಿಳಿಸಿದರು. | * ಅಧೀಕ್ಷಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ವರದಿ ನೀಡುವಂತೆ ತಿಳಿಸಿದರು. |
| 2. | ಶ್ರೀ.ಹೆಚ್.ಎಂ.ಶರತ್ ಚಂದ್ರ, ಊರುಗುತ್ತಿ ಗ್ರಾಮ, ಕೊಡ್ಲಿಪೇಟೆ | * DOLO ತಂತಿ ದಪ್ಪ ಗಾತ್ರದ ಫ್ಯೂಸ್ ತಂತಿ ಹಾಕಿರುವುದು ಹಾಗೂ ಪರಿವರ್ತಕ ಸುಟ್ಟುಹೋಗಿರುವ ಬಗ್ಗೆ ತಿಳಿಸಿದರು. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸರಿಯಾದ AMPSನ ಫ್ಯೂಸ್ ತಂತಿ ಹಾಕಿ ಸುಟ್ಟು ಹೋಗಿರುವ ಪರಿವರ್ತಕ ಬದಲಾಯಿಸಿ ಕೊಡುವಂತೆ ಶಾಖಾಧಿಕಾರಿಯವರಿಗೆ ಸೂಚಿಸಿದರು |
| 3. | | * ಆರ್ ಆರ್ ಸಂಖ್ಯೆ KIP74909 ಮತ್ತು UGL 659 ಗಳಲ್ಲಿ ಹೆಚ್ಚಿನ ವಿದ್ಯುತ್ ಬಿಲ್ಲು ಬಂದಿರುವ ಬಗ್ಗೆ ಕೇಳಿದರು. | * ಅಧೀಕ್ಷಕ ಇಂಜಿನಿಯರ್(ವಿ) ರವರು ಕಂದಾಯ ಶಾಖೆಯಲ್ಲಿ ವಿದ್ಯುತ್ ಬಿಲ್ಲನ್ನು ಪರಿಶೀಲಿಸಿಕೊಳ್ಳುವಂತೆ ಗ್ರಾಹಕರಿಗೆ ತಿಳಿಸಿದರು. |
| 4. | ರೈತ ಸಂಘ ತಾಲ್ಲೂಕು ಘಟಕ, ಸೋಮವಾರಪೇಟೆ | * 10 ಹೆಚ್.ಪಿ ವರಗಿನ LT4C ಐ.ಪಿ ಸ್ಥಾವರಗಳಿಗೆ ಉಚಿತ ವಿದ್ಯುತ್ ನೀಡುವಂತೆ ಕೇಳಿಕೊಂಡರು. | * ಈ ವಿಷಯವು ಸರ್ಕಾರದ ಮಟ್ಟದಲ್ಲಿದ್ದು ಸದ್ಯದ ಮಟ್ಟಿಗೆ ಹಣ ಪಾವತಿಸುವಂತೆ ಹಾಗೂ DBT ವ್ಯವಸ್ಥೆ ಇರುವುದರಿಂದ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಕಂದಾಯ ಶಾಖೆಗೆ ಸಲ್ಲಿಸುವಂತೆ ತಿಳಿಸಲಾಯಿತು. |

| | | | |
|---|---|---|---|
| 5. | ರೈತ ಸಂಘ ತಾಲ್ಲೂಕು ಘಟಕ, ಸೋಮವಾರಪೇಟೆ | * ಅಕ್ರಮ ಸಕ್ರಮ ಐ.ಪಿ ಸೆಟ್ ಸ್ಥಾವರಗಳಿಗೆ ಹಣ ಕಟ್ಟಿಸಿಕೊಳ್ಳುವಂತೆ ಕೇಳಿಕೊಂಡರು. | * ಅಧೀಕ್ಷಕ ಇಂಜಿನಿಯರ್(ವಿ) ರವರು ದಿ.22.09.2023ರ ನಂತರ ಕೋರಿಸಿದ ಐ.ಪಿ ಸೆಟ್ ಸ್ಥಾವರಗಳಿಗೆ ಸ್ವಯಂ ನಿರ್ವಹಣೆ ವೆಚ್ಚದಿಂದ 500 ಮೀಟರ್ ಒಳಗಡೆ ಇದ್ದರೆ ಸರ್ಕಾರದ ಆದೇಶ ಬಂದ ಮೇಲೆ ಹಣ ಪಾವತಿಸುವಂತೆ ತಿಳಿಸಲಾಯಿತು .ಹಾಗೂ 500 ಮೀಟರ್ ದೂರದಿಂದ ಮುಂದಕ್ಕೆ ಇದ್ದರೆ ಸೋಲಾರ್ ಅಳವಡಿಸಿಕೊಳ್ಳುವಂತೆ ಸೂಚಿಸಿದರು. |
| 6. | ಶ್ರೀ.ಪೊನ್ನಪ್ಪ, ತಾಕೇರಿ ಗ್ರಾಮ, ಶಾಂತಳ್ಳಿ | * ಪರಿವರ್ತಕ ಅಧಿಕ ಭಾರ ಹೊಂದಿರುವ ಬಗ್ಗೆ ತಿಳಿಸಿದರು. | * ಅಧೀಕ್ಷಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ನೀಡಿ ಕಾಮಗಾರಿಗೆ ಅನುಮೋದನೆ ಪಡೆದುಕೊಳ್ಳುವಂತೆ ಸೂಚಿಸಿದರು. |
| 7. | ಶ್ರೀ.ದಿನೇಶ್, ಹರಪಳ್ಳಿ ಗ್ರಾಮ, ಶಾಂತಳ್ಳಿ | * ಕಾಫಿ ತೋಟದ ಮಧ್ಯ ಭಾಗದಲ್ಲಿರುವ ಪರಿವರ್ತಕವನ್ನು ಸ್ಥಳಾಂತರಿಸುವ ಬಗ್ಗೆ ತಿಳಿಸಿದರು. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ., ಸೋಮವಾರಪೇಟೆ ರವರಿಗೆ ವರದಿ ನೀಡುವಂತೆ ತಿಳಿಸಿದರು. |
| 8. | ಹರಪಳ್ಳಿ ಗ್ರಾಮ ಸಮಿತಿ, ಹರಪಳ್ಳಿ ಗ್ರಾಮ, ಶಾಂತಳ್ಳಿ | * ಪರಿವರ್ತಕ ಅಧಿಕ ಭಾರ ಹೊಂದಿರುವ ಬಗ್ಗೆ ಹಾಗೂ ಶಾಲೆ ಪಕ್ಕದಲ್ಲಿರುವ ವಿದ್ಯುತ್ ಕಂಬ ರಸ್ತೆಗೆ ಬಾಗಿರುವ ಬಗ್ಗೆ ತಿಳಿಸಿದರು. | * ಅಧೀಕ್ಷಕ ಇಂಜಿನಿಯರ್(ವಿ) ರವರು ಅಧಿಕ ಭಾರ ಹೊಂದಿರುವ ಪರಿವರ್ತಕಕ್ಕೆ ಅಂದಾಜು ಪ ಸಲ್ಲಿಸಲು ತಿಳಿಸಿದರು. ಹಾಗೂ ಬಾಗಿರುವ ವಿದ್ಯುತ್ ಕಂಬವನ್ನು ಕೂಡಲೆ ಸರಿಪಡಿಸುವಂತೆ ಶಾಖಾಧಿಕಾರಿಯವರಿಗೆ ಸೂಚಿಸಿದರು. |
| 9. | ಶ್ರೀ.ಲಕ್ಷ್ಮಣ್, ಗರಗಂದೂರು ಗ್ರಾಮ, ಸೋಮವಾರಪೇಟೆ | * ವಿದ್ಯುತ್ ಕಂಬ ಮುರಿದು ಬೀಳುವ ಸಾಧ್ಯತೆ ಇದೆ ಎಂದು ತಿಳಿಸಿದರು. | * ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸಿ ಕಂಬ ಬದಲಾಯಿಸುವಂತೆ ಶಾಖಾಧಿಕಾರಿಯವರಿಗೆ ತಿಳಿಸಿದರು. |

ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತ ಗ್ರಾಹಕರಿಗೆ ಉತ್ತಮ ಸೇವೆ ಸಲ್ಲಿಸಲು ಸರ್ವ ಪ್ರಯತ್ನ ಮಾಡಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ,

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:-

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ ಮಡಿಕೇರಿ ರವರಿಗೆ ಮಾಹಿತಿಗಾಗಿ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಸೋಮವಾರಪೇಟೆ ಉಪವಿಭಾಗ ರವರ ಮಾಹಿತಿಗಾಗಿ. ಹಾಗೂ ದೂರುಗಳ ಇತ್ಯಾರ್ಥ ಪಡಿಸಲು ಅವಶ್ಯಕ ಕ್ರಮವಹಿಸಲು ತಿಳಿಸಲಾಗಿದೆ.
7. ಹಿಆಸ/ಪ್ರಕ/ಕಡತ.